

ಅರೆಕಲ್ಲಿನ ಮೂಲನಿವಾಸಿಗಳು ದೋಸೆ ಹೊಯ್ಯುತ್ತಿರುವುದು



ಗುಜ್ಜೆ ಸಾಂಬಾರ್ ಮಾಡಲು ಕತ್ತರಿಸುತ್ತಿರುವುದು

ಇನ್ನು ಕೆಲವು ದೇವರಕಾಡುಗಳಲ್ಲಿ ವರ್ಷಕ್ಕೊಮ್ಮೆ ಹಬ್ಬ ನಡೆಯುತ್ತದೆ. ಎಲ್ಲಾ ಜನಾಂಗದವರು ಸೇರಿ ದೇವರನ್ನು ನಮಿಸುತ್ತಾ ಹಬ್ಬವನ್ನು ಆಚರಿಸುತ್ತಾರೆ.

ಅರೆಕಲ್ಲು ಅಯ್ಯಪ್ಪ ದೇವರಕಾಡು ಮಡಿಕೇರಿ ತಾಲ್ಲೂಕಿನ ಸಂಪಾಜೆ ವಲಯದ ಅರೆಕಲ್ಲಿನಲ್ಲಿದೆ. ಮಡಿಕೇರಿಯಿಂದ ಇಲ್ಲಿಗೆ ಸುಮಾರು 29 ಕಿ.ಮೀ. ದೂರ. ಕೊಡಗು ಜಿಲ್ಲೆಯ ಅತೀ ದೊಡ್ಡ ದೇವರಕಾಡು ಎಂಬ ಹೆಗ್ಗಳಿಕೆ ಇದರದ್ದು. ಇದು 1113 ಎಕರೆ ವಿಶಾಲವಾಗಿದೆ. ಈ ದೇವರಕಾಡಿನ ಅಯ್ಯಪ್ಪ ಹೆಚ್ಚು ಶಕ್ತಿಯುತ ದೇವರಾಗಿದ್ದು, ಗ್ರಾಮಸ್ಥರು ಅಯ್ಯಪ್ಪನನ್ನು ತುಂಬಾ ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತಾರೆ. ಇದನ್ನು ಅಯ್ಯಪ್ಪ ದೇವಸ್ಥಾನ ಎಂದು ಕರೆದರೂ ಗುಡಿಯಲ್ಲಿ ಇರುವುದು ಅಯ್ಯಪ್ಪ ದೇವರಲ್ಲ ಬದಲಾಗಿ ಉದ್ಭವ ಶಿವಲಿಂಗ. ಆದರೆ ಅಯ್ಯಪ್ಪನ ಆಯುಧಗಳಿವೆ. ಶಿವನಿಗೆ ಕಾವಲಾಗಿ ಇರುವುದು ಅಯ್ಯಪ್ಪ ಎಂಬ ನಂಬಿಕೆ. ಈ ದೇವರಕಾಡಿನ ನಿರ್ವಹಣೆ ಪೂಮಲೆ ಕುಡಿಯರದ್ದಾಗಿದೆ.

ಅಯ್ಯಪ್ಪ ದೇವಸ್ಥಾನದಲ್ಲಿ ಪ್ರತೀ ಸಂಕ್ರಮಣದಂದು ಪೂಜೆ ಇರುತ್ತದೆ ಹಾಗೂ ತುಲಾ ಸಂಕ್ರಮಣದಂದು ವಿಶೇಷ ಪೂಜೆ ಇರುತ್ತದೆ. ತುಲಾ ಸಂಕ್ರಮಣದಂದು ಬೆಳಗ್ಗೆ ಕಣಿ ಪೂಜೆ, ಮಧ್ಯಾಹ್ನ ತುಲಾಭಾರ ಸೇವೆ ನಡೆಯುತ್ತದೆ. ಗಣೇಶ ಚತುರ್ಥಿ ದಿನ ಕದಿರು ಕಟ್ಟುವ ಕಾರ್ಯಕ್ರಮ ನಡೆಸುತ್ತಾರೆ. ಅಯ್ಯಪ್ಪ ದೇವಸ್ಥಾನದ ಸಮೀಪ ನಾಗನಕಟ್ಟೆ ಇದೆ. ಈ ದೇವರಕಾಡು ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತೆ ಇರುವುದರಿಂದ ಅಲ್ಲಿಯ ಕೆಲವು ಆಚರಣೆಗಳು ಇಲ್ಲಿಗೂ ಬಂದಿವೆ.

ಪ್ರತಿ ವರ್ಷ ಮಾರ್ಚ್ 14 ಮತ್ತು 15ರಂದು ಇಲ್ಲಿ ಹಬ್ಬ ನಡೆಯುತ್ತದೆ. ಇದನ್ನು ನಡೆಸುವವರು ಸ್ಥಳೀಯರಲ್ಲ. ಈ ಊರಿನಿಂದ 25 ಕಿ.ಮೀ. ದೂರದ ಗಾಳಿಬೀಡಿನಲ್ಲಿ ನೆಲೆಸಿರುವ ಪೂಮಲೆಕುಡಿಯರು. ಹಬ್ಬದ ಸಿದ್ಧತೆಗಳು, ಅಂಗಣ ಕೆತ್ತುವುದು, ಗುಡಿಯ ನಿರ್ಮಲೀಕರಣ, ಚಪ್ಪರ ಹಾಕುವುದು ಇತ್ಯಾದಿ ಕೆಲಸಗಳನ್ನು ಮಾಡುವುದು ಪೂಮಲೆಕುಡಿಯರ ಹಬ್ಬದ ಸೇವೆ. ತಲತಲಾಂತರಗಳಿಂದ ಕೊಡವ ಸಮುದಾಯಕ್ಕೆ ಸೇರಿದ ಪಾಂಡೀರ ಮನೆತನದವರು ಮುಖ್ಯ ಆಡಳಿತಗಾರರಾಗಿದ್ದರೆ, ಉತ್ಸವದ ವ್ಯವಸ್ಥೆಯನ್ನು, ಆರಾಧನಾ ವಿಧಿಗಳನ್ನು ನಡೆಸುವವರು ಪೂಮಲೆಕುಡಿಯರೇ. ಸಂಪ್ರದಾಯದಂತೆ ಹಬ್ಬದ ಸಮಯದಲ್ಲಿ ಗಾಳಿಬೀಡಿನ ಬಾಡತ್ತೊಕ್ಕಡ ಮನೆ (ಪೂಮಲೆಕುಡಿಯರ ಮನೆತನ)ಯಿಂದ ದೇವರ ಭಂಡಾರವನ್ನು ಕಾಡುದಾರಿಯಲ್ಲಿ ಕಾಲ್ನಡಿಗೆಯಲ್ಲಿ ದುಡಿ ಹಾಗೂ ಜಾಗಟೆ ಬಾರಿಸುತ್ತ ತರುವ ಮೂಲಕ ಹಬ್ಬಕ್ಕೆ ಚಾಲನೆ ನೀಡುತ್ತಾರೆ.

ಇಲ್ಲಿ ದರ್ಶನಕ್ಕೊಳಗಾಗುವ ಇವರು ಬಿಳಿ ಕುಪ್ಪಸ (ಉದ್ದ ನಿಲುವಂಗಿ), ಸೊಂಟಕ್ಕೆ ಕೆಂಪು ಬಣ್ಣದ ಬಟ್ಟೆಯ ಪಟ್ಟಿ, ತಲೆಗೆ ಬಿಳಿ ಮುಂಡಾಸು ಹೀಗೆ ಸಾಂಪ್ರದಾಯಿಕ ಕೊಡಗಿನ ಪೋಷಾಕನ್ನು ದೇವರ ಆರಾಧನೆಯ ಸಂದರ್ಭದಲ್ಲಿ ಧರಿಸುತ್ತಾರೆ. ಮುಖ್ಯ ಪಾತ್ರಿ ಮಾತ್ರ ಬಿಳಿ ಪಟ್ಟೆಗಳಿರುವ ಕೆಂಪು ಅಥವಾ ಕಂದು ಕುಪ್ಪಸ ಧರಿಸುತ್ತಾನೆ. ಅಯ್ಯಪ್ಪನು ರಾಜವಂಶಸ್ಥನಾಗಿದ್ದನೆಂದು ನಂಬಿಕೆ ಇರುವುದರಿಂದ, ಮುಖ್ಯ ಪಾತ್ರಿಯದು ರಾಜವೇಷ. ಪೂಮಲೆಕುಡಿಯರು ಬೈರಾಸು ಸುತ್ತಿ, ಅಂಗಿ ಮಾತ್ರ ಧರಿಸಿ ದರ್ಶನಕ್ಕೊಳಗಾಗುತ್ತಾರೆ. ಅಯ್ಯಪ್ಪ ಗುಡಿಯೊಳಗಿಂದ ಪ್ರಸಾದ ತೆಗೆದುಕೊಂಡ ಪಾತ್ರಿಗಳೆಲ್ಲ ಆವೇಶಭರಿತರಾಗಿ ಕೈಯಲ್ಲಿ ಬೆತ್ತ ಹಿಡಿದು ಹೂಂಕರಿಸುತ್ತ ಗುಡಿಗೆ ಸುತ್ತು ಬರುತ್ತಾರೆ. ಕೊಡಗಿನ



ಅರೆಕಲ್ಲು ಅಯ್ಯಪ್ಪ ದೇವಸ್ಥಾನ



ಉಮ್ಮತ್ತಾಟ– ಹೆಂಗಸರ ಕುಣಿತ



ಬೊಳ್ಕಾಟ್– ದೀಪದ ಸುತ್ತ ಕುಣಿತ